ಅ) ಸದರಿ ಕಲಾವಿದರುಗಳ ಪೈಕಿ ಶ್ರೀ ಕೆ. ಎನ್. ಭಟ್ ಶಿರಾಡಿಪಾಲ್‌ರವರು ಸೇರಿದ್ದಾರೆಯೇ? ಹಾಗಿಲ್ಲದಿದ್ದಲ್ಲಿ ಅವರಿಗೆ ಮಾಸಾಶನ ಮಂಜೂರು ಮಾಡಲು ಕೈಗೊಂಡ ಕ್ರಮಗಳೇನು ?

ಶ್ರೀ ಎಂ. ಪಿ. ಪ್ರಕಾಶ್ (ವಾರ್ತಾ ಪ್ರವಾಸೋದ್ಯಮ, ಸಂಸ್ಕೃತಿ ಮತ್ತು ಬೆಂಗಳೂರು ಅಭಿವೃದ್ಧಿ ಮಂತ್ರಿಗಳು).—

ಅ) ಈ ತಾಲ್ಲೂಕಿನ ಸಾಹಿತಿಗಳಿಗೆ ಮಾಸಾಶನ ಮಂಜೂರಾಗಿರುವುದಿಲ್ಲ.

ಸಂಗೀತ ಕ್ಷೇತ್ರಕ್ಕೆ ಸಂಬಂಧಿಸಿದ ಇಬ್ಬರು ಕಲಾವಿದರಿಗೆ ರೂ ೧೫೦-೦೦ ಗಳ ಮಾಸಾಶನ ಮಂಜೂರು ಮಾಡಲಾಗಿದೆ.

ಆ) ಹೌದು,

ಶ್ರೇಯತರಿಗೆ ರೂ ೫೦೦-೦೦ ಗಳ ಗೌರವಧನವನ್ನು ದಿನಾಂಕ ೧-೮-೧೯೮೭ ರಿಂದ ಮಂಜೂರು ಮಾಡಲಾಗಿದೆ.

ಹಸಿರು ಪಟ್ಟಿ ಕಾಯಿದೆ ಸಡಿಲಿಸುವ ಬಗ್ಗೆ

೯೯. ಶ್ರೀ ಎ. ಕೃಷ್ಣಪ್ಪ (ಪರ್ತೂರು).— ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರು ನಗರ ಜಿಲ್ಲೆಯಲ್ಲಿ ಹಸಿರು ಪಟ್ಟಿ ಕಾಯಿದೆ ಸಡಿಲಪಡಿಸಿ ಹರಿಜನ ಗಿರಿಜನರಿಗೆ ನಿವೇಶನಗಳನ್ನು ಹಂಚುವ ಉದ್ದೇಶ ಸರ್ಕಾರಕ್ಕೆ ಇದೆಯೇ ?

ಆ) ಹಾಗಿದ್ದಲ್ಲಿ, ಎಂದಿನಿಂದ ಜಾರಿಗೆ ತರಲಾಗುವುದು ?

ಶ್ರೀ ಬಿ. ಸೋಮಶೇಖರ್ (ನಗರಾಭಿವೃದ್ಧಿ ಮಂತ್ರಿಗಳು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ದಕ್ಷಿಣ ಕನ್ನಡ ಜಿಲ್ಲೆ ಮಂಡಲ ಪಂಚಾಯಿತ್‌ಗಳಿಗೆ ಕಾರ್ಯದರ್ಶಿಗಳ ನೇಮಕದ ಬಗ್ಗೆ

೭೬೬. ಶ್ರೀ ಕೆ. ವಸಂತ ಬಂಗೇರ (ಬೆಳ್ತಂಗಡಿ).— ಮಾನ್ಯ ಗ್ರಾಮಾಣ ಅಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧) ದಕ್ಷಿಣ ಕನ್ನಡ ಜಿಲ್ಲೆಯ ಮಂಡಲ ಪಂಚಾಯ್ತಿಗಳಿಗೆ ಕಾರ್ಯದರ್ಶಿಗಳನ್ನು ನೇಮಿಸದಿರುವುದರಿಂದ ಮಂಡಲಗಳ ಕಾರ್ಯಕಲಾಪಗಳು ಸ್ಥಗಿತಗೊಂಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

೨) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಅಬ್ದುಲ್ ನಜೀರ್‌ಸಾಬ್ (ಗ್ರಾಮಾಣ ಅಭಿವೃದ್ಧಿ ಮತ್ತು ಪಂಚಾಯಂತ್‌ರಾಜ್ ಮಂತ್ರಿಗಳು).—

೧) ಇಲ್ಲ.

೨) ಉದ್ಭವಿಸುವುದಿಲ್ಲ. ಅಲ್ಲದೆ, ಈಗ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಲ್ಲಾ ಮಂಡಲ ಕಾರ್ಯದರ್ಶಿಗಳ ಹುದ್ದೆಗಳನ್ನು ತುಂಬಲಾಗಿದೆ.